**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 658/2018

ಸಿ.ಡಬ್ಲ್ಯೂ 16 ಪಿ.ಡಬ್ಲ್ಯೂ 7

| | | |
|---|---|---|
| ಸಾಕ್ಷಿದಾರರ ಹೆಸರು | ಮಲ್ಲಪ್ಪ ಚೋರಗಸ್ತಿ | |
| ತಂದೆ/ಗಂಡನ ಹೆಸರು | ನಂದಪ್ಪ | |
| ವಯಸ್ಸು | 64 | ವರ್ಷ |
| ಉದ್ಯೋಗ | ನಿವೃತ್ತ ಉಪ ವಿಭಾಗ ಅಧಿಕಾರಿಗಳು | |
| ವಾಸಸ್ಥಳ | ವಿಜಯಪೂರ | |

**ಸಾಕ್ಷಿಯನ್ನು ಇಂದು ದಿನಾಂಕಃ 02.06.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

**1.** ನಾನು **2014** ರಿಂದ **2020** ರವರೆಗೆ ಬಸವನ ಬಾಗೇವಾಡಿಯಲ್ಲಿ ತಹಶೀಲ್ದಾರ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ**.**

**2.** ದಿನಾಂಕ**. 27.08.2017** ರಂದು ಬೆಳಿಗ್ಗೆ **4.00** ಗಂಟೆಗೆ ನಾನು ನಮ್ಮ ಮನೆಯಲ್ಲಿ ಇದ್ದಾಗ ಚಾಸಾ**-17** ರವರು ನನಗೆ ಫೋನ್ ಮಾಡಿ ಮಟ್ಟಿಹಾಳ ಕ್ರಾಸದಲ್ಲಿ ಮಟ್ಟಿಹಾಳ ಗ್ರಾಮದ ಕೆಲವು ದಲಿತ ಸಮುದಾಯದ ಜನರು ಕೂಡಿಕೊಂಡು ಕ್ರಾಸ ಮಧ್ಯದಲ್ಲಿ ಹಾಯ್ದು ಹೋಗಿರುವ ರಾಜ್ಯ ಹೆದ್ದಾರಿಯ ಮಧ್ಯದಲ್ಲಿ ಕಾನೂನು ಬಾಹಿರವಾಗಿ ಒಂದು ಬ್ಯಾರೆಲ್ ನಲ್ಲಿ ಸಿಮೆಂಟ್ ಮತ್ತು ಮರಳು ಹಾಕಿ ನೀಲಿ ದ್ವಜವನ್ನು ಹಾರಿಸಿರುತ್ತಾರೆ ಎಂದು ಮಾಹಿತಿ

ತಿಳಿಸಿರುತ್ತಾರೆ. ನಂತರ ನಾನು, ನಮ್ಮ ಸಿಬ್ಬಂದಿ ಮತ್ತು ಇತರರು ಎಲ್ಲರೂ ಸೇರಿ ಸ್ಥಳಕ್ಕೆ ಹೋಗಿ ನೋಡಲಾಗಿ ಸುಮಾರು **30** ರಿಂದ **35** ಜನರು ಗುಂಪು ಕಟ್ಟಿಕೊಂಡು ನಿಂತಿದ್ದರು. ನಂತರ ನಾನು ಮತ್ತು ಚಾಸಾ-**17** ರವರು ಆರೋಪಿತರಿಗೆ ನೀಲಿ ಧ್ವಜವನ್ನು ತೆರವುಗೊಳಿಸುವಂತೆ ತಿಳಿಸಿ ಹೇಳಿದ್ದರು ಕೂಡಾ ಅವರುಗಳು ತೆರುವುಗೊಳಿಸಿವುದಿಲ್ಲ. ನಂತರ ಸದರಿ ನೀಲಿ ದ್ವಜದಿಂದ ಕೋಮು ಗಲಬೆಗಳು ಮತ್ತು ಸಾರ್ವಜನಿಕ ರಸ್ತೆಗೆ ಅನಾನೂಕೂಲ ಆಗುವ ಸಾಧ್ಯತೆ ಇರುವುದರಿಂದ ಚಾಸಾ-**1** ಮತ್ತು ಅವರ ಸಿಬ್ಬಂದಿಗಳು ನೀಲಿ ದ್ವಜವನ್ನು ತೆರವುಗೊಳಿಸಿರುತ್ತಾರೆ. ಆಗ ಸಮಯ ಬೆಳಿಗ್ಗೆ **6.00** ಗಂಟೆ ಆಗಿತ್ತು.

**3.** ಈ ಕುರಿತು ಚಾಸಾ-**1** ರವರು ಆರೋಪಿತರ ವಿರುದ್ದ ದೂರನ್ನು ನೀಡಿರುತ್ತಾರೆ. ನಾನು ಈ ಗಲಾಟೆ ಕುರಿತು ತನಿಕಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**4.** ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ **3,4,7,9,15,17** ರಿಂದ **20,22** ರಿಂದ **33** ಮತ್ತು **36** ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. **1,2,5,6,10** ರಿಂದ **12,14** ಮತ್ತು **21** ನೇ ಆರೋಪಿತರು ಗೈರು ಹಾಜರು ಆಗಿದ್ದು, ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. **8** ಮತ್ತು **16** ನೇ ಆರೋಪಿತರು ಈ ಪ್ರಕರಣದಿಂದ ಪ್ರತ್ಯೇಕಿಸಲ್ಪಟ್ಟಿರುತ್ತಾರೆ. **13, 34** ಮತ್ತು **35** ನೇ ಆರೋಪಿತರು ಮೃತಪಟ್ಟಿರುತ್ತಾರೆ.

**<u>ಪಾಟೀ ಸವಾಲು:- 9, 20, 27, 31, 36 ನೇ ಆರೋಪಿ ಪರ</u>**

**<u>ಶ್ರೀ.ಪಿ.ಎಮ್.ಕೆ. ವಕೀಲರಿಂದ</u>**

**1.** ನಾನು ದಿನಾಂಕ**:30.08.2017** ರಂದು ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಚಾಸಾ**-17** ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಮಟ್ಟಿಹಾಳ ಕ್ರಾಸ್ ನಲ್ಲಿ ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ನನ್ನ ಹೇಳಿಕೆಯನ್ನು ಓದಿರುತ್ತೇನೆ. ನಾನು ಘಟನಾ ಸ್ಥಳ ಎಂದು ಹೇಳುವ ಸ್ಥಳಕ್ಕೆ ಹೋದಾಗ ಬೆಳಿಗ್ಗೆ **5** ರಿಂದ **5.15** ಗಂಟೆ ಆಗಿತ್ತು. ನಾನು ಘಟನಾ ಸ್ಥಳ ಎಂದು ಹೇಳುವ ಸ್ಥಳಕ್ಕೆ ಹೋದಾಗ ಬೆಳಿಗ್ಗೆ **5** ರಿಂದ **5.15** ಗಂಟೆ ಆಗಿತ್ತು ಎಂಬುದರ ಕುರಿತು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

**2.** ನಾನು ಮತ್ತು ನಮ್ಮ ಸಿಬ್ಬಂದಿಯಾದ ಹಾದಿಮನಿ ಮತ್ತು ಚಾಲಕ ಬಸವರಾಜ ಎಂಬುವವರು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ನಾನು ಮತ್ತು ನಮ್ಮ ಸಿಬ್ಬಂದಿಯಾದ ಹಾದಿಮನಿ ಮತ್ತು ಚಾಲಕ ಬಸವರಾಜ ಎಂಬುವವರು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂಬುದರ ಕುರಿತು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಒಂದು ಬ್ಯಾರೆಲ್‌ನಲ್ಲಿ ಮರಳು ಮತ್ತು ಸಿಮೆಂಟ್ ಹಾಕಿ ನೀಲಿ ಧ್ವಜವನ್ನು

ಆರೋಪಿತರು ಹಾರಿಸಿದ್ದರು ಎಂಬುದರ ಕುರಿತು ಹೇಳಿಲ್ಲ ಎಂದರೆ ಸರಿ. ಸದರಿ ನೀಲಿ ಧ್ವಜವನ್ನು ಚಾಸಾ-**1** ಮತ್ತು ಅವರ ಸಿಬ್ಬಂದಿಗಳು ತೆರವುಗೊಳಿಸಿರುತ್ತಾರೆ. ಚಾಸಾ-**1** ರವರ ಸಿಬ್ಬಂದಿಗಳು ಯಾರು ಮತ್ತು ಅವರ ಹೆಸರುಗಳು ಏನೂ ಎಂಬುದು ನನಗೆ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ. **3.** ನಾನು ಘಟನಾ ಸ್ಥಳಕ್ಕೆ ಹೋದಾಗ ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಎಷ್ಟು ಜನರು ಇದ್ದರು ಮತ್ತು ಅವರುಗಳು ಯಾವ ದಿಕ್ಕಿಗೆ ನಿಂತಿದ್ದರು ಎಂಬುದರ ಕುರಿತು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಸುಮಾರು **30-35** ಜನರು ಇದ್ದರು. ಸದರಿ **30-35** ಜನರು ಮಟ್ಟಿಹಾಳ ಮತ್ತು ಬ.ಬಾಗೇವಾಡಿ ರಸ್ತೆಯ ಕಡೆಗೆ ನಿಂತಿದ್ದರು. ಸದರಿ **30-35** ಜನರು ಮಟ್ಟಿಹಾಳ ಕ್ರಾಸ್ ದಿಂದ **20** ಮೀಟರ್ ಅಂತರದಲ್ಲಿ ನಿಂತಿದ್ದರು. ಆರೋಪಿತರುಗಳ ಹೆಸರುಗಳು ಮತ್ತು ಅವರ ವೈಯಕ್ತಿಕ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ಆರೋಪಿತರು ನಾನು ಹೇಳಿದಂತೆ ಯಾವುದೇ ನೀಲಿ ಧ್ವಜವನ್ನು ಹಾರಿಸದೇ ಇದ್ದರೂ ಕೂಡಾ ಚಾಸಾ-**1** ರವರು ಪಿ.ಡಿ.ಓ ಇರುವುದರಿಂದ ಅವರ ಮಾತನ್ನು ಕೇಳಿ ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ಆರೋಪಿತರು ನೀಲಿ ಧ್ವಜವನ್ನು ಹಾರಿಸಿರುವ ಬಗ್ಗೆ ಪೋಲಿಸರು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ನನಗೆ ಈ

ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಕೂಡಾ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಬರೆದಿರುವ ಎಲ್ಲ ಅಂಶಗಳು ಸುಳ್ಳಿನಿಂದ ಕೂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ದೂರಿಗೆ ಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:- 9, 20, 27, 31, 36 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟಿ ಸವಾಲನ್ನು ಉಳಿದ ಆರೋಪಿತರ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**

Accused No.1, 3 to 5, 7, 9, 12, 14, 15, 17, 20, 21, 22, 24 to 26, 28 to 33 and 36 are present. A-2, 6, 10, 11, 18, 19, 23, 27 are absent and their counsel preset. EP filed. Perused. Allowed.

L/APP present.

CW-1 and CW-4 are present and Examined as PW-3 and 4 and got marked Ex-P-2 to 2A,

L/APP submitted that CW-5 to 11 may be given up. In view of submission of L/APP CW-5 to 11 given up.

Issue W/S to CW-12 to 16.

Call on.11.05.2026.

06.04.2026

I Addl.CJ & JMFC, B.Bagewadi.